CC.NO. 43/2025 PW2

**ಸಾಕ್ಷಿಗೆ ದಿನಾಂಕಃ 16.12.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಆರೋಪಿತರ ಪರ ಶ್ರೀ ಕೆ ಎಸ್ ಎಸ್ ವಕೀಲರಿಂದಃಃ**

ಈ ಪ್ರಕರಣದಲ್ಲಿ ನಾನು ಪೊಲೀಸರು ಹೇಳಿದ್ದರಿಂದ ದಾಖಲೆಗೆ ಸಹಿ ಮಾಡಿದ್ದನ್ನು ಹೊರತುಪಡಿಸಿ ಬೇರೆ ಯಾವುದೇ ವಿಚಾರ ನನಗೆ ತಿಳಿದಿರುವುದಿಲ್ಲ ಎಂದರೆ ಸರಿ. ನಾನು ಈ ಪ್ರಕರಣದಲ್ಲಿ ಪೊಲೀಸರು ಹೇಳಿದ್ದರಿಂದ ನನ್ನ ಮುಖ್ಯ ವಿಚಾರಣಾದಲ್ಲಿರುವ ಸಾಕ್ಷ್ಯವನ್ನು ಹೇಳಿದ್ದೇನೆಂದರೆ ಸರಿ. ನನಗೆ ಈ ಪ್ರಕರಣದ ವಿಚಾರ ಗೊತ್ತಿಲ್ಲ ಎಂದರೆ ಸರಿ. ಎಂಒ-1 ವಸ್ತುವನ್ನು ಪೊಲೀಸರು ನಮಗೆ ತೋರಿಸಿದ್ದರಿಂದ ಆ ಬಗ್ಗೆ ನನಗೆ ತಿಳಿದಿರುತ್ತದೆ ಎಂದರೆ ಸರಿ. ನಿಪಿ-3 ಭಾವಚಿತ್ರವನ್ನು ಪೊಲೀಸರು ಹೇಳಿದ್ದರಿಂದ ನಾನು ಸದರಿ ಭಾವಚಿತ್ರಕ್ಕೆ ನಿಂತುಕೊಂಡೆ, ಸದರಿ ನಿಪಿ-3 ನ್ನು ಯಾವ ಕಾರಣಕ್ಕೆ ಪೊಲೀಸರು ತೆಗೆದುಕೊಂಡರು ಎಂದು ತಿಳಿದಿರುವುದಿಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಃಃ ಮರು ವಿಚಾರಣೆ ಇಲ್ಲಃಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಓ

ಪ್ರ.ದ.ನ್ಯಾ.ದಂಃ ನ.ರಾ.ಪುರ.

ಸಾಕ್ಷಿ ಸಹಿಃ